29. On Air port Road, Marath Halli at Village Road.

30. On Air port Road, Marath Halli at junction of Under Pass DRR.

31. K.R.Pura Bus Stand.

32. At Kengeri Bus Stand, Mysore Road.

33. At Byatarayanapura on Bellary Road (near junction of BBMP office complex).

34. Bharatiya Vidya Bhavan, Devaraj Aras Road.

35. On Hosur Road "T" Junction with Tavarekere Main Road (opposite Sai Sadan & Prestige Acropolis) (High Rise Apartments Condominium).

36. Mission Road at the foot of Fly over.

37. Opposite Mariamma Temple on Old Madras Road (Near Tin Factory).

38. After Beniganahalli ROB on Old Madras Road.

39. Near Tin Factory of K.R.Pura Cable Stayed bridge.

40. Opposite to shopper stop at Bannerghatta Road.

1455 (1812) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಎಲಿವೇಟೆಡ್ ರಸ್ತೆಯನ್ನು ನಿರ್ಮಿಸಲಾಗುವುದೇ;

ಆ) ಹೌದಾದಲ್ಲಿ ಯಾವ ಮಾರ್ಗದಲ್ಲಿ ಕೈಗೊಳ್ಳಲಾಗುವುದು ಮತ್ತು ಇದ್ಕಕಾಗಿ ಮಂಜೂರಾದ ಅನುದಾನ ಎಷ್ಟು;

ಇ) ಯಾವ ಸಂಸ್ಥೆಗೆ ಕಾಮಗಾರಿ ನೀಡಲಾಗಿದೆ (ವಿವರ ಒದಗಿಸುವುದು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಹೌದು

ಆ) ಎಲಿವೇಟೆಡ್ ರಸ್ತೆಯನ್ನು ಕೆಳಕಂಡ ಮಾರ್ಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

1) ಯಶವಂತಪುರದಿಂದ ಕರ್ನಾಟಕ ಭವನ (ರಾಜಾಜಿನಗರ ಪ್ರವೇಶದ್ವಾರ)	–	4.975 ಕಿ.ಮೀ
2) ಕರ್ನಾಟಕ ಭವನದಿಂದ ಶಿವಶಂಕರ ಸರ್ಕಲ್ (ಕೋಟೆ ಮೈದಾನ)	–	4.818 ಕಿ.ಮೀ
3) ಶಿವಶಂಕರ್ ವೃತ್ತದಿಂದ ಆಡುಗೋಡಿ	–	4.925 ಕಿ.ಮೀ
4) ಆಡುಗೋಡಿಯಿಂದ ಗುರುದ್ವಾರ	–	4.589 ಕಿ.ಮೀ
5) ಗುರುದ್ವಾರದಿಂದ ಜಯಮಹಲ್ ರಸ್ತೆ ಜಂಕ್ಷನ್	–	5.778 ಕಿ.ಮೀ
6) ಜಯಮಹಲ್ ರಸ್ತೆ ಜಂಕ್ಷನ್‌ನಿಂದ ಯಶವಂತಪುರ	–	4.424 ಕಿ.ಮೀ
ಒಟ್ಟು	–	**29.509 ಕಿ.ಮೀ**

ಈ ಯೋಜನೆಯನ್ನು ಬಿ.ಓ.ಟಿ ಆಧಾರದಲ್ಲಿ ಸ್ಥಾಪಿಸಲಾಗುವುದು. ಈ ಬಗ್ಗೆ ಪ್ರಾರಂಭಿಕ ಹಂತದ Expression of interest (ಇ.ಒ.ಐ) ಈಗಾಗಲೇ ಹೊರಡಿಸಲಾಗಿದೆ. ಹಾಗೂ ಪ್ರಸ್ತಾವನೆಗಳನ್ನು ನಿರೀಕ್ಷಿಸಲಾಗಿದೆ. ಈ ಯೋಜನೆಯನ್ನು ಖಾಸಗಿ ಬಂಡವಾಳದ ಮೂಲಕ ಕೈಗೊಳ್ಳಲು ಪ್ರಸ್ತಾಪಿಸಿರುವುದರಿಂದ ಇದಕ್ಕೆ ಬೇಕಾದ Vaibility Gap Funding ಮಾತ್ರ ಪಾಲಿಕೆಯಿಂದ ನೀಡಲಾಗುವುದು. ಇದಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2007–08 ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಹಣಕಾಸು ಒದಗಿಸಲು ಯೋಜಿಸಲಾಗಿದೆ.

ಇ) ಇನ್ನೂ ಯಾವುದೇ ಸಂಸ್ಥೆಗೆ ಕಾಮಗಾರಿ ಗುತ್ತಿಗೆಯನ್ನು ನೀಡಿರುವುದಿಲ್ಲ.